ಚುನಾವಣೆಯ ಕೆಲಸದಲ್ಲಿ ತೊಡಗಿದರು. ಲೋಹಿಯಾಗೆ ಚುನಾವಣಾ ಪ್ರಚಾರವೆಂದರೆ ಕೇವಲ ಜನರನ್ನು ತಮ್ಮ ಪಕ್ಷಕ್ಕೆ ಒಲಿಸಿಕೊಳ್ಳುವ ರಾಜಕೀಯ ಕಸರತ್ತಾಗಿರಲಿಲ್ಲ; ಹೊಸ ಮನುಷ್ಯರನ್ನು ಸೃಷ್ಟಿಸುವ ಸವಾಲೂ ಆಗಿತ್ತು. ಹಿಂದೆ ಮುಂಬೈ ಮುನಿಸಿಪಲ್ ಚುನಾವಣೆಯಲ್ಲಿ, ಉಪಚುನಾವಣೆಗಳಲ್ಲಿ ಅಷ್ಟಿಷ್ಟು ಸಾಧನೆ ಮಾಡಿದ್ದ ಪಕ್ಷ ಆತ್ಮವಿಶ್ವಾಸದಿಂದಲೇ ಸಾರ್ವತ್ರಿಕ ಚುನಾವಣೆಗೆ ಹೊರಟಿತ್ತು.

ಇತ್ತ ಮೈಸೂರು ರಾಜ್ಯವೂ ಚುನಾವಣೆಗೆ ಸಜ್ಜಾಯಿತು. ಕಾಗೋಡು ರೈತ ಚಳುವಳಿಯ ನಂತರ ನಾಯಕರಾಗಿ ರೂಪುಗೊಂಡಿದ್ದ ಶಾಂತವೇರಿ ಗೋಪಾಲಗೌಡರು ಸಾಗರ–ಹೊಸನಗರ ಕ್ಷೇತ್ರದಿಂದ ಚುನಾವಣೆಗೆ ನಿಂತರು. ಗೌಡರ ಪ್ರಚಾರ ಸರಳವಾಗಿತ್ತು. ಒಂದು ಊರು ತಲುಪುವುದು; ಜನರಿಗೆ ಪಕ್ಷದ ಪ್ರಣಾಳಿಕೆಯನ್ನು ವಿವರಿಸುವುದು; ಹಣಬಲವಿಲ್ಲದ ತಮ್ಮ ಪಕ್ಷಕ್ಕೆ 'ಒಂದು ನೋಟು; ಒಂದು ವೋಟು ಕೊಡಿ' ಎಂದು ಕೇಳುವುದು.

ಮುಂದಿನ ಊರಿಗೆ ಯಾರೋ ಬಸ್ ಚಾರ್ಜ್ ಕೊಟ್ಟು ಗೌಡರನ್ನು ಬಸ್ಸು ಹತ್ತಿಸುವರು. ಇಲ್ಲದಿದ್ದರೆ ಕಾಲ್ನಡಿಗೆ. ಗೌಡರ ಮಾತು ಕೇಳಲು ಜನ ನಡುರಾತ್ರಿಯಾದರೂ ಕಾಯುತ್ತಿರುತ್ತಿದ್ದರು. ಕೋಣಂದೂರು ಲಿಂಗಪ್ಪ ಹೇಳುವಂತೆ, 'ಗೌಡರು ನನಗೆ ವೋಟು ಕೊಡಿ ಎಂದು ಕೇಳುತ್ತಿರಲಿಲ್ಲ; ಸಮಾಜವಾದಿ ಪಕ್ಷಕ್ಕೆ ವೋಟು ಕೊಡಿ' ಎಂದಷ್ಟೇ ಹೇಳುತ್ತಿದ್ದರು.

ಗೌಡರ ಎದುರಾಳಿ ಕಾಂಗ್ರೆಸ್ಸಿನ ಬದರಿ ನಾರಾಯಣ ಅಯ್ಯಂಗಾರ್ ಭೂಮಾಲೀಕರು. ಹಣವುಳ್ಳವರು. ಆದರೆ ಕಾಗೋಡು ಚಳುವಳಿಯಲ್ಲಿ ಆರಂಭವಾಗಿದ್ದ ಬಡ ರೈತರು ಹಾಗೂ ಭೂಮಾಲೀಕರ ನಡುವಣ ಸಂಘರ್ಷ ಈ ಚುನಾವಣಾ ಕ್ಷೇತ್ರದಲ್ಲಿ ಸಮಾಜವಾದಿ ಪಕ್ಷಕ್ಕೆ ರಾಜಕೀಯ ಫಲ ತಂದುಕೊಟ್ಟಿತು. ಸಮಾಜವಾದದ ಸಮಾನತೆಯ ಭಾಷೆ ಎಲ್ಲ ಜಾತಿಗಳನ್ನೂ ಸೆಳೆಯಿತು. ಗೋಪಾಲಗೌಡರು ಗೆದ್ದರು. ಗೌಡರ ಚುನಾವಣಾ ವೆಚ್ಚ ಐದು ಸಾವಿರ ರೂಪಾಯಿಯಷ್ಟಾಗಿತ್ತು.

ಮೈಸೂರು ರಾಜ್ಯದಲ್ಲಿ ಸಮಾಜವಾದಿ ಪಕ್ಷ ಗೆದ್ದಿದ್ದು ಒಂದೇ ಸ್ಥಾನ. ದೇಶದಲ್ಲಿ ಲೋಕಸಭೆಯ 256 ಸ್ಥಾನಗಳಿಗೆ ಸ್ಪರ್ಧಿಸಿದ್ದ ಸಮಾಜವಾದಿ ಪಕ್ಷ 12 ಸ್ಥಾನ ಗೆದ್ದಿತ್ತು; 1299 ವಿಧಾನಸಭಾ ಸ್ಥಾನಗಳಿಗೆ ಸ್ಪರ್ಧಿಸಿ 126 ಸ್ಥಾನ ಗೆದ್ದಿತ್ತು. ದೇಶದಲ್ಲಿ ಪಕ್ಷ ಶೇಕಡ 10.6 ವೋಟು ಪಡೆದಿತ್ತು. ಇದು ಕಾಂಗ್ರೆಸ್ ಬಿಟ್ಟರೆ, ಉಳಿದೆಲ್ಲ ವಿರೋಧ ಪಕ್ಷಗಳ ನಡುವೆ ಅತ್ಯಂತ ಹೆಚ್ಚಿನ ಶೇಕಡವಾರು ವೋಟು. ಆದರೂ ಸಮಾಜವಾದಿ ಪಕ್ಷ ಪಡೆದ ಒಟ್ಟು ಸ್ಥಾನಗಳು ಕಮ್ಯುನಿಸ್ಟ್ ಪಕ್ಷಕ್ಕಿಂತ ಕಡಿಮೆಯಿದ್ದವು.

ಭಾರಿ ಫಲಿತಾಂಶದ ನಿರೀಕ್ಷೆಯಲ್ಲಿದ್ದ ಪಕ್ಷದ ನಾಯಕರು, ಕಾರ್ಯಕರ್ತರು ನಿರಾಶರಾದರು. ಲೋಹಿಯಾ ಮತ್ತು ಆಚಾರ್ಯ ನರೇಂದ್ರದೇವ ಮಾತ್ರ ಫಲಿತಾಂಶ ಕಂಡು ಗಾಬರಿಯಾಗಲಿಲ್ಲ. ಜೆ.ಪಿ. ಪಕ್ಷದ ಹಿನ್ನಡೆಗೆ ತಾನೇ ಕಾರಣ ಎಂದು ಖಿನ್ನರಾದರು. ಅಷ್ಟೊತ್ತಿಗಾಗಲೇ ಯೂಸುಫ್ ಮೆಹರಾಲಿ ತೀರಿಕೊಂಡಿದ್ದರು. ಅಚ್ಯುತ್ ಪಟವರ್ಧನ್, ಅರುಣಾ ಅಸಫ್ ಅಲಿ ಪಕ್ಷ ಬಿಟ್ಟಿದ್ದರು.

ಪಕ್ಷದಲ್ಲಿ ತಮ್ಮ ಉತ್ಸಾಹಕ್ಕೆ ತಕ್ಕ ಸಮಾನ ಮನಸ್ಕರಿಲ್ಲದೆ ಲೋಹಿಯಾ ಏಕಾಂಗಿಯಾಗಿದ್ದರು. ಆದರೆ ಛಲ, ನಂಬಿಕೆ ಕುಗ್ಗಿರಲಿಲ್ಲ: 'ಜೀವಂತವಾದ ಹಾಗೂ ಕ್ರಿಯಾಶಾಲಿಯಾದ ರಾಜಕೀಯ ಪಕ್ಷ ಐದು ವರ್ಷದ ಕೊನೆಯವರೆಗೂ ಕಾಯಬೇಕಾಗಿಲ್ಲ. ಸಮಾಜವಾದಿ ಪಕ್ಷ ತನ್ನ ಹೋರಾಟ ಮುಂದುವರಿಸಿದರೆ, ಐದು ವರ್ಷದ ಅವಧಿಗೆ ಮೊದಲೇ ಸರ್ಕಾರವನ್ನು ಸೋಲಿಸಬಹುದು' ಎಂದರು ಲೋಹಿಯಾ. ಇದು ಕಾರ್ಯಕರ್ತರನ್ನು ಹುರಿದುಂಬಿಸುವ ಒಣಮಾತಾಗಿರಲಿಲ್ಲ; ಹೋರಾಟ ರಾಜಕಾರಣದ ಮೂಲಕ ಅಧಿಕಾರ ರಾಜಕಾರಣವನ್ನು ತುದಿಗಾಲಲ್ಲಿ ನಿಲ್ಲಿಸಬೇಕೆಂಬ ತಾತ್ವಿಕ ನಿಲುವಾಗಿತ್ತು. ಭೂತದ ಬಗ್ಗೆ ಹಳಹಳಿಸದೆ ಇಂದು, ನಾಳೆಗಳನ್ನು ನೋಡಲೆತ್ನಿಸುತ್ತಿದ್ದ ಲೋಹಿಯಾ 'ಅಧಿಕಾರದ ಇಚ್ಛಾಶಕ್ತಿ' ಎಂಬ ಶಕ್ತಿಯುತ ನುಡಿಗಟ್ಟನ್ನು ಪಕ್ಷಕ್ಕೆ ಕೊಟ್ಟರು.

ಚುನಾವಣಾ ಫಲಿತಾಂಶವನ್ನು ವಿಶ್ಲೇಷಿಸಲು ಮಧ್ಯಪ್ರದೇಶದ ಪಚಮಡಿಯಲ್ಲಿ ಸಮಾಜವಾದಿ ಅಧಿವೇಶನ ಶುರುವಾಯಿತು. ಲೋಹಿಯಾ ಅಧಿವೇಶನದ ಅಧ್ಯಕ್ಷರಾಗಿದ್ದರು. ಸೋಲಿನಿಂದ ಕಂಗೆಟ್ಟಿದ್ದ ನಾಯಕರು ಲೋಹಿಯಾ ಮಾತಿಗಾಗಿ ಎದುರು ನೋಡುತ್ತಿದ್ದರು.

'ಸಮಾಜವಾದದ ಹೊಸ ಕಾಣ್ಕೆ' ಎಂಬ ಲೋಹಿಯಾರ ಚಾರಿತ್ರಿಕ ಭಾಷಣ ಭಾರತದಲ್ಲಿ ಬಂಡವಾಳವಾದ ಹಾಗೂ ಕಮ್ಯುನಿಸಂಗಿಂತ ಭಿನ್ನವಾದ ಸಮಾಜವಾದದ ಹಾದಿಯನ್ನು ತೆರೆದಿಟ್ಟಿತು. 'ಸಮಾಜವಾದಿಗಳು ಜೈಲು, ಗುದ್ದಲಿ, ವೋಟು – ಈ ಮೂರನ್ನೂ ಒಂದರೊಡನೊಂದು ಬೆಸೆದಾಗ ಮಾತ್ರ ಗುರಿಯತ್ತ ನಡೆಯಬಹುದು' ಎಂದರು ಲೋಹಿಯಾ.

ಆದರೂ ಅಧಿವೇಶನದ ನಂತರ ಸಮಾಜವಾದಿ ಪಕ್ಷ ನಿರ್ಜೀವವಾಯಿತು. ಸಾರ್ವತ್ರಿಕ ಚುನಾವಣೆಗೆ ಮುನ್ನ ಕೃಪಲಾನಿ ಮೊದಲಾದವರು ಕಟ್ಟಿದ್ದ 'ಕೃಷಿಕ ಮಜ್ದೂರ್ ಪ್ರಜಾ ಪಾರ್ಟಿ' ಕೂಡ ಚುನಾವಣೆಯಲ್ಲಿ ನೆಲ ಕಚ್ಚಿತ್ತು. ಸೋತಿದ್ದ ಈ ಎರಡೂ ಪಕ್ಷಗಳು ವಿಲೀನಗೊಂಡು 'ಪ್ರಜಾ ಸಮಾಜವಾದಿ ಪಕ್ಷ' (ಪಿಎಸ್‌ಪಿ) ಅಸ್ತಿತ್ವಕ್ಕೆ ಬಂತು; ಈ ಪ್ರಯೋಗದ ಹಿನ್ನೆಲೆಯಲ್ಲೂ ಲೋಹಿಯಾರ ತಾತ್ವಿಕ ಪ್ರಯತ್ನವಿತ್ತು.

ಹೊಸ ಪಕ್ಷದ ಹಾದಿ ಸುಗಮವಾಗಿರಲಿಲ್ಲ. ನೆಹರು ಬಗ್ಗೆ ಅಕ್ಕರೆಯಿದ್ದ ಜೆ.ಪಿ., ಅಶೋಕ ಮೆಹ್ತಾಗೆ ಲೋಹಿಯಾ ಕಾಂಗ್ರೆಸ್ ವಿರುದ್ಧ ಮಾಡುತ್ತಿದ್ದ ದಾಳಿ ಇಷ್ಟವಾಗುತ್ತಿರಲಿಲ್ಲ. ಕಾಂಗ್ರೆಸ್ಸನ್ನು ಬಲಪಡಿಸಬೇಕೆಂಬುದು ಈ ಇಬ್ಬರ ಆಸೆ! 'ನೆಹರು ಕೈ ಬಲಪಡಿಸಬೇಕೆನ್ನುವ ಪಿಎಸ್‌ಪಿ ನಾಯಕರು ಮೊದಲು ತಮ್ಮ ಪಕ್ಷವನ್ನು ಬಲಪಡಿಸಿಕೊಳ್ಳುವುದು ಒಳ್ಳೆಯದು!' ಎನ್ನುತ್ತಿದ್ದ ಲೋಹಿಯಾ, ಸ್ಪಷ್ಟವಾಗಿ ಹೇಳಿದರು: 'ಜನ ನೆಹರೂರನ್ನು ಕೆಳಗಿಳಿಸಿ ಜಯಪ್ರಕಾಶ್ ನಾರಾಯಣರನ್ನು ಆ ಜಾಗದಲ್ಲಿ ಕೂರಿಸಿದ ದಿನ ನನಗೆ ಆನಂದವಾಗುತ್ತದೆ.'

ಆದರೆ ಜೆ.ಪಿ. ವೈರಾಗ್ಯದತ್ತ ವಾಲುತ್ತಾ, ಸರ್ವೋದಯದ ಕಡೆಗೆ ನಡೆಯತೊಡಗಿದ್ದರು. ರಾಜಕೀಯದಲ್ಲಿ ಈ ಬಗೆಯ ಬೆಳವಣಿಗೆಗಳನ್ನು ಕಂಡ ಲೋಹಿಯಾಗೆ 'ಅರ್ಥಹೀನತೆ ಹಾಗೂ

